**<u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>**

ಸಿ.ಸಿ. ನಂ.23/2023

ಪಿ.ಡಬ್ಯೂಃ 1

ಸಿಡಬ್ಲ್ಯೂ-1

ಸಾಕ್ಷಿದಾರರ ಹೆಸರು : ಅಬಲೆಪ್ಪಾ ಧರಣ್ಣನವರ್

ತಂದೆಯ ಹೆಸರು : ಸಾಯಬಣ್ಣ

ವಯಸ್ಸು : 28 ವರ್ಷ

ಉದ್ಯೋಗ : ಅರಣ್ಯ ರಕ್ಷಕ ಅಡ್ಲೂರು ಗಸ್ತು

ವಾಸ : ಅಗಸೂರು

ದಿನಾಂಕಃ 12-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ.ಸ. ಆ ರವರಿಂದ ಃ**

1. ನಾನು ದಿನಾಂಕಃ 04-12-2018 ರಿಂದ ಈ ತನಕ ಮಾಸ್ತಿಕಟ್ಟಾ ವಲಯದ ಅಗಸೂರು ಶಾಖೆಯ ಅಡ್ಲೂರು ಗಸ್ತಿನಲ್ಲಿ ಅರಣ್ಯ ರಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 14-04-2022 ರ ಬೆಳಿಗ್ಗಿನ ಜಾವ ಸುಮಾರು 5-00 ಗಂಟೆಗೆ ನಾನು, ಚಾಸಾ-4 ಮತ್ತು 5 ರವರು ರಾತ್ರಿ ಗಸ್ತು ಇಲಾಖಾ ಜೀಪ್ ನಲ್ಲಿ ಮಾಡುತ್ತಿದ್ದೆವು. ನಾವು ಅಡ್ಲೂರಿನ ತರಂಗ ಹೋಟೆಲ್ ಬಳಿ ಬರುತ್ತಿದ್ದಾಗ ಎಣ್ಣೆ ಗದ್ದೆ ರಸ್ತೆಯಲ್ಲಿ ಯಾವುದೊ ವಾಹನ ಬರುತ್ತಿರುವ ಬೆಳಕು ಕಂಡಿತು. ಆಗ ನಮ್ಮ ಇಲಾಖಾ ವಾಹನವನ್ನು ಆ ಎಣ್ಣೆಗದ್ದೆ ರಸ್ತೆಗೆ ತಿರುಗಿಸಿ, ಎದುರಿನಿಂದ ಬರುತ್ತಿದ್ದ ವಾಹನವನ್ನು ಟಾರ್ಚ್ ಸಹಾಯದಿಂದ ಕೈ ಸನ್ನೆ ಮಾಡಿ ನಿಲ್ಲಿಸಲು ಸೂಚಿಸಿದೆವು. ಆಗ ಆ ವಾಹನವನ್ನು ನಿಲ್ಲಿಸಿ, ಡ್ರೈವರ್ ಮತ್ತು ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿ ಓಡಲು ಪ್ರಾರಂಭಿಸಿದರು. ಆಗ ನಾನು ಟಾರ್ಚ್ ಸಹಾಯದಿಂದ ಡ್ರೈವರ್ ಮಣಿಕಂಠ ಮಂಜುನಾಥ

ನಾಯಕ ಅಗಸೂರು ಹಾಗೂ ಇನ್ನೊಬ್ಬ ಮಹೇಶ ಅನಂತ ಗೌಡಾ , ಅಡ್ಲೂರು ಎಂಬವರಾಗಿ ಗೊತ್ತು ಪಡಿಸಿಕೊಂಡೆ. ನಾನು ಆ ಊರಿನ ಗಸ್ತಿನಲ್ಲಿ ಕೆಲಸ ಮಾಡುತ್ತಿರುವುದರಿಂದ ಅವರ ಮುಖ ಪರಿಚಯ ನನಗೆ ಇತ್ತು. ಅವರನ್ನು ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಿದಾಗ ಕಾಡು ಪ್ರದೇಶವಾಗಿರುವುದರಿಂದ ಅವರು ಓಡಿ ಕಣ್ಮರೆಯಾದರು .

3. ನಂತರ ಆ ವಾಹನವನ್ನು ಪರಿಶೀಲಿಸಿದಾಗ, ಅದು ಟಾಟಾ ಕಂಪನಿಯ 207 ಪಿಕಅಪ್ ವಾಹನವಾಗಿತ್ತು. ಅದರ ವಾಹನ ಸಂಖ್ಯೆ ಕೆಎ-47/4878 ಆಗಿತ್ತು . ಅದರ ಹಿಂಬದಿ ಪರಿಶೀಲಿಸಿದಾಗ, ಸಾಗುವಾಣಿ ಜಾತಿಯ ಮರದ ತುಂಡುಗಳು ಕಂಡು ಬಂತು. ಆ ಮರದ ತುಂಡುಗಳ ಮೇಲೆ ಅರಣ್ಯ ಇಲಾಖೆಯ ಮೊಹರು ಇದೆಯಾ ಎಂದು ಪರಿಶೀಲಿಸಿದಾಗ ಮೊಹರು ಕಂಡು ಬಂದಿರುವುದಿಲ್ಲ. ಅವರಿಬ್ಬರು ಓಡಿ ಹೋಗಿರುವುದನ್ನು ನೋಡಿದಾಗ ಅರಣ್ಯ ಅಪರಾಧದಲ್ಲಿ ಭಾಗಿಯಾಗಿರುವುದು ಮನದಟ್ಟಾಯಿತು. ಆಗ ಚಾಸಾ -5 ರವರು ಪಂಚರನ್ನು ಕರೆಸಿದ್ದಾರೆ. ಪಂಚರ ಸಮಕ್ಷಮ ಆ ಮರದ ತುಂಡುಗಳನ್ನು ಕೆಳಗೆ ಇಳಿಸಿ, ನೋಡಿದಾಗ ಅವುಗಳು ಹಸಿ ಸಾಗುವಾನಿ ಮರದ ತುಂಡುಗಳಾಗಿತ್ತು. 19 ತುಂಡುಗಳು ಇದ್ದವು. ಅವುಗಳನ್ನು ಅಳತೆ ಮಾಡಿ ಅವುಗಳಿಗೆ 1 ರಿಂದ 19 ನಂಬರಗಳನ್ನು ನೀಡಲಾಯಿತು . ಒಟ್ಟು 0.529 ಘನ ಮೀಟರ್ ಗಳಷ್ಟು ಅಳತೆಯ ಮರದ ತುಂಡುಗಳಿದ್ದವು.

4. ಸ್ಥಳದಲ್ಲಿ ಪಂಚನಾಮೆ ಮಾಡಲಾಗಿರುತ್ತದೆ. ನಾನು ಪ್ರಕರಣ ಸ್ಥಳದಲ್ಲಿ ದಾಖಲಿಸಿರುತ್ತೇನೆ. ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಗುರುತಿಸಲಾಯಿತು. ಪ್ರ. ವ. ವರದಿಯ ಕಾರ್ಬನ ಪ್ರತಿಯನ್ನು ಹಾಜರು ಪಡಿಸಿದ್ದು ಮೂಲ ಪ್ರತಿ ಹಾಜರು ಪಡಿಸದೇ ಇರುವುದರಿಂದ ಗುರುತಿಸಿರುವುದಿಲ್ಲ.

ಪಿ.ಡಬ್ಲ್ಯೂ: 1

ಸಿಡಬ್ಲ್ಯೂ-1

**ಮುಖ್ಯ ವಿಚಾರಣೆಯನ್ನು ಸ.ಸ .ಅ . ರವರ ಕೋರಿಕೆಯ ಮೇರೆಗೆ ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.